

ಭ್ರಮೆಯಾಗಿ ನಿಧಾನವಾಗಿ ನಿಮ್ಮ ಮನಸ್ಸಿನೊಳಗೆ ಆವರಿಸುತ್ತದೆ. ದಿನದಿನವೂ ನೋಡುವ ಕಣ್ಣುಗಳಿಗೆ ಏಕತಾನತೆ ಬಂದು ಎಲ್ಲವೂ ಶುಭ್ರವಾಗಿ ಬಿಳಿಪರದೆ ಕಣ್ಣಮುಂದೆ ನೇತು ಹಾಕಿದಂತೆ ಕಾಣುತ್ತದೆ. ನಮ್ಮ ನೇತ್ರಗಳು ದಿನವೂ ವೈವಿಧ್ಯದ ಬಣ್ಣಗಳ ನೋಡುತ್ತಿರಬೇಕು. ಆಗ ಮಾತ್ರ ವ್ಯತ್ಯಾಸಗಳನ್ನು ಸ್ಪಷ್ಟವಾಗಿ ಗುರುತಿಸುತ್ತವೆ. ಇಲ್ಲದಿದ್ದರೆ ಕಣ್ಣುಗಳೂ ಹಾದಿತಪ್ಪಿ, ಅವಕ್ಕೂ ಮನಸ್ಸಿಗೂ ಏಕಾಲದಲ್ಲಿ ಹುಚ್ಚು ಹಿಡಿದಂತಾಗಬಹುದು. ಯಾವ ಬಣ್ಣವೇ ಆಗಲಿ ಕಣ್ಣಿಗೆ ಅಧಿಪತ್ಯ ಎನಿಸಬಾರದು' ಎಂದು ಶಾಂತಿದೂತನ ಸಂದೇಶ ಸಾರುವಂತೆ ನಿಧಾನವಾಗಿ ಹೇಳಿದ. ಈತನ ಮಾತು ನನಗೆ ಕಿಂಚಿತ್ತೂ ಅರ್ಥವಾಗಲಿಲ್ಲ. ವಿಷಯಗಳು ತಲೆ ಒಳಗೆ ನುಸುಳುವ ಬದಲು ತಲೆ ಮೇಲಿಂದ ಎಗರಿ ಎಗರಿ ಹಾರಿ ಹೋದವು!

'ತಲೆಬುಡವಿಲ್ಲದ ಮನಸ್ಸು, ಬಣ್ಣ, ಭ್ರಮೆ ಎಂದು ಏನೇನೋ ಒದರುವ ಇವನು ಪಕ್ಕಾ ಹುಚ್ಚು ನನ್ಮಗನೆ ಇರಬೇಕು' ಎಂದು ನಿರ್ಧರಿಸಿಕೊಂಡೆ. ಹಿಮಾಲಯ ವಾಸಕ್ಕೆ, ಅಗಾಧ ಮೌನಕ್ಕೆ, ತಿಕ್ಕಿ ತೀಡುವ ಚಳಿಗೆ, ಮನದೊಳಗೆ ಹೂತುಹೋದ ಅನೇಕ ವಿಚಾರಗಳು ಹೇಗೆಂದರೆ ಹಾಗೆ ಎದ್ದು ಬರುತ್ತವಂತೆ. ಇದು ನಿಜವೋ ಸುಳ್ಳೋ ಗೊತ್ತಿಲ್ಲ! ಇವನ ಮಟ್ಟಿಗೆ ಇದ್ದರೂ ಇದ್ದೀತು. ಮನುಷ್ಯನಿಗೆ ಒಂಟಿತನ ಕಲಿಸುವ ಪಾಠ ತುಂಬಾ ದೊಡ್ಡದು.

ಇದರ ನಡುವೆ ಒಂದು ಅಚ್ಚರಿಯ ಸಂಗತಿ ಹೇಳಬೇಕು. ಆ ದಿನ ಬೆಳಗ್ಗೆ ನಾವು ನಾಲ್ಕನೇ ಕ್ಯಾಂಪಿನಿಂದ ಹೊರಟಾಗ ನಮಗೆ ದಾರಿ ತೋರುವ ಸ್ಥಳೀಯ ಹುಡುಗ ಕಣ್ಣಿಗೆ ಕಟ್ಟುವ ಗಂಭೀರ ಕಥೆಯೊಂದನ್ನು ಹೇಳಿದ್ದ. ಅವನ ಪ್ರಕಾರ, ಒಂದು ಕ್ಯಾಂಪಿನ ಜವಾಬ್ದಾರಿ ಹೊತ್ತಿದ್ದ ಡಾಕ್ಟರನೊಬ್ಬ ಏಕಾಂತಕ್ಕೆ ಹೆದರಿ ಒಂದು ದಿನ ಎಕರಬಕರನಂತೆ ಆಡಿದನಂತೆ. ಅದಕ್ಕೂ ಮೊದಲು ಸಹಜವಾಗೇ ಇದ್ದನಂತೆ. ವಾರದ ಹಿಂದೆ ತಿಕ್ಕಲು ಕೆರಳಿ ರಾತ್ರೋ ರಾತ್ರಿ ಡೇರೆ ಬಿಟ್ಟು ಎತ್ತಲೋ ನಡೆದು ಹೋದನಂತೆ. ಮೂರು ದಿನ ಊಟವಿಲ್ಲದೆ ಹಿಮದಲ್ಲಿ ಸಿಕ್ಕಿಬಿದ್ದಿದ್ದನಂತೆ. ಅವನ ಬಳಿಯಿದ್ದ ವಾಕಿಟಾಕಿಯಿಂದ ಅವನ ಇರುವಿಕೆ ಗೊತ್ತಾಯಿತೆಂದೂ; ಇಲ್ಲದೆ ಹೋದಲ್ಲಿ ಅವನ ಹೆಣವೂ ಸಿಗುತ್ತಿರಲಿಲ್ಲವೆಂದೂ ಆ ಹುಡುಗ ವಿಷಾದ ಸೂಚಿಸಿದ. 'ಸಾಬ್, ಚಟ್ಟ ಮಾಡ್ಕೊಂಡು ಥೇಟ್ ಡೆಡ್‌ಬಾಡಿ ತರಹ ಅವನನ್ನು ಕಟ್ಕೊಂಡು ಹೊತ್ಕೊಂಡು ಬಂದ್ವು' ಎಂದು ಹೇಳಿದ್ದು ತಕ್ಷಣ ನೆನಪಿಗೆ ಬಂದು ಈ ಆಸಾಮಿಯೂ ಅವನಂತೆಯೇ ಇರಬಹುದೇ? ಎಂದೆನಿಸಿತು.

ಅದಕ್ಕೆಲ್ಲಕ್ಕಿಂತ ಮುಖ್ಯವಾಗಿ ಅವನಿಗೆ ಹಿಮ ಚಿರತೆ ಏಕೆ ಕಾಣುತ್ತಿಲ್ಲ ಎಂಬ ವಿಷಯವನ್ನು ನಾನು ಮೊದಲು ತಿಳಿಯಬೇಕಿತ್ತು. ಅವನು ಮತ್ತೆ ಏನೇನೋ ಹೇಳಿ ತಲೆತಿನ್ನುವುದು ನನಗೂ ಬೇಡವಾಗಿತ್ತು. ಥಂಡಿ ಗಾಳಿಯ ಹೊಡೆತವೂ ಹೆಚ್ಚಾಗತೊಡಗಿತ್ತು. ಹೀಗಾಗಿ ಮತ್ತೆ ಅವನ ಕೆದಕಿದೆ. 'ನೋಡಿ, ಬಿಳಿಬರ್ಫು ಅದರ ಮೈ ಮೇಲೆ ಬಿದ್ದಿರುತ್ತೆ! ಆಗ ಹೇಗೆ ಕಂಡು ಹಿಡಿಯುವುದು ನೀವೇ ಹೇಳಿ. ಅದು ಕೂತು ಬಿಟ್ಟರಂತೂ ನಮ್ಮ ಪಕ್ಕದಲ್ಲೇ ಇದ್ದರೂ ಗೊತ್ತಾಗುವುದಿಲ್ಲ. ನಿಮಗೆ ಹಸಿರು ಬೆಟ್ಟದ ಮೇಲೆ ಓಡುತ್ತಾ ಕಂಡಿದೆ. ಹೀಗಾಗಿ ನೋಡಿದ್ದೀರಿ. ಹೀಗೆ ಸಮುದ್ರದಂತೆ ರಾಚಿಕೊಂಡು ಬಿದ್ದಿರುವ ಹಿಮದ ಮೇಲೆ ಅದು ಚಲಿಸಿದರೂ ಗುರುತಿಸುವುದು ಕಷ್ಟ. ನೋಡುತ್ತಿರಿ ಒಂದು ದಿನ ಅದರ ಪಟ ತೆಗೆದೇ ತೆಗೆಯುತ್ತೇನೆ' ಎಂದು ದೃಢವಾಗಿ ಹೇಳಿದ. ಹಿಮಚಿರತೆ ನಮ್ಮ ಅಕ್ಕಪಕ್ಕ ಇದ್ದರೂ ತಿಳಿಯುವುದಿಲ್ಲ ಎಂಬ ಅವನ ಆ ಒಂದು ಮಾತೇ ಭಯ ಹುಟ್ಟಿಸಿತು. ನಿರ್ಜನ ಬಯಲ ಟೆಂಟಿನಲ್ಲಿ ಮಲಗಿದ್ದಾಗ ಎತ್ತ ಕಡೆಯಿಂದಾದರೂ ಅದು ಬಂದು ಬಾಯಿ ಹಾಕಿ ನಮ್ಮನ್ನು ಎಳೆದು ಒಯ್ಯಬಹುದೆಂದು ಅಂದಾಜಿಸತೊಡಗಿದೆವು. ●